ಚಹ ಕುದಿಯುತ್ತಿತ್ತು, ಎರಡೂ ಕಪ್ ಗಳಿಗೆ ಸೋಸಿದಳು. ಕಪ್ ತೆಗೆದುಕೊಂಡು ಅವಿನಾಶ ಅಂದಿನ ನ್ಯೂಸ್ ಪೇಪರೆತ್ತಿಕೊಂಡ. ಯಾಕೋ ಯಾವ ಸುದ್ದಿಯೂ ತಲೆಗೆ ತಾಕಲಿಲ್ಲ ಅವನಿಗೆ, ಇನ್ನವು ತನ್ನ ಸಮಸ್ಯೆ ಅಲ್ಲವೇ ಅಲ್ಲ ಎನ್ನಿಸಿ ಪೇಪರ್ ಟೇಬಲ್ ಮೇಲೆ ಒಗೆಯುವಾಗಲೇ ಫೋನ್ ಸದ್ದು ಮಾಡಿತ್ತು; ಗೆಳೆಯ ಪ್ರದೀಪನದ್ದು. 'ಹತ್ತು ಹೊಡೀತು ಇನ್ನೂ ಚಹಾ ಕುಡೀಲಿಕತ್ತೀ? ತಿರುಗಿ ಬ್ಯಾರೇ ಏನೋ ಕುಡಿಯೋ ಟೈಮ್ ಆತು ಹಾಹಾಹಾ...ಅವಿ ಹೊರಗೆ ತಲೆ ಹಾಕ್ಯರೇ ನೋಡು ಇಟ್ಸ ಡ್ರಿಝುಲಿಂಗ್ ಸಡನ್ಲೀ. ಅರ್ಧ ತಾಸಲ್ಲಿ ಬರ್ತೀನಿ ಹೆಂಗೂ ಸೂಟಿ ಅದಲ್ಲ ಇವತ್ತು'

'ಅಲ್ಲಾ ಅದು...'

'ಬೀರ್ ನಾನ್ ತರ್ತೀನಿ ಬಿಡೋ, ನೀ ರಾಗ ಎಳೀಬೇಡ ಹಾಹಾ...' ನಗುವಿನೊಂದಿಗೇ ಫೋನ್ ಕಟ್ಟಾಗಿತ್ತು. ಅವಿನಾಶನಿಗೇಕೋ ಬೀರ್‌ನ ಮೂಡೇ ಇರಲಿಲ್ಲ. ಅವನ ತಲೆಯಲ್ಲಿ ಕೂತರೆ ನಿಂತರೆ ಒಂದೇ ರಿಹರ್ಸಲ್ ಲೂಪು ಸುತ್ತುತ್ತಿತ್ತು - ಅಮೆರಿಕನ್ ಎಂಬೆಸ್ಸಿಯಲ್ಲಿ ನಡೀಬಹುದಾದ ಪ್ರಶ್ನೋತ್ತರ ಸರಮಾಲೆ!

ಎಂಬೆಸ್ಸಿ ಆಫೀಸರ್‌ನ ಆ ದಿನದ ಮೂಡ್ ಮೇಲೇನೇ ತನ್ನ ವೀಸಾ ಭವಿಷ್ಯ ನಿಂತಿದೆ ಅಂತ ಖಂಡಿತವಾಗಿ ಗೊತ್ತಿದ್ದರಿಂದ ಇಂಟರವ್ಯೂ ಕೋಣೆಯೊಳಗೆ ಹ್ಯಾಗೆ ನಡಕೊಂಡು ಹೋಗಬೇಕು? ಅಂತ ಪ್ರಾಕ್ಟೀಸ್ ಮಾಡಿಕೋತಾನೇ ಟೇಬಲ್ ನ ಆಚೆಗೆ ನಿಂತು ಪ್ರಶ್ನೆ ಕೇಳಿ, ಈಚೆಗೆ ಬಂದು ಉತ್ತರ ಕೊಡಹತ್ತಿದ.

'ನಿಮ್ಮ ಅಲ್ಲಿಯ ಫೈನಾನ್ಸಿಯಲ್ ಆಧಾರ ಏನು?'

'ಸ್ಟೂಡೆಂಟ್ಶಿಪ್ ಫ್ರಮ್ ಸೋ ಎಂಡ್ ಸೋ ಯುನಿವರ್ಸಿಟಿ'

'ಇಲ್ಲಿ ಭಾರತದಲ್ಲೇನಿದೆ ಫೈನಾನ್ಶಿಯಲ್ ಸೆಕ್ಯುರಿಟಿ?'

ತನಗೆ ಆಫೀಸಿನಿಂದ ಬಂದ ಇಪ್ಪತ್ತೈದು ಲಕ್ಷ, ಎಫ್‌ಡಿಯ ಬ್ಯಾಂಕ್ ಸ್ಟೇಟ್ ಮೆಂಟಗಳು ಮತ್ತೆ ಒಂದೂವರೆ ಎಕರೆಯ ನೀರಾವರಿ ನೆಲದ ಸರ್ಟಿಫಿಕೇಟು ತೋರಿಸಿದರೆ ಸಾಕು.

'ಯುಎಸ್‌ನಲ್ಲೇ ಕೆಲ ವರ್ಷ ಇರಬಯಸುತ್ತೀರಾ?' ಎಂಬ ಪ್ರಶ್ನೆಗೆ

'ಇಲ್ಲ ಎಂ.ಎಸ್. ಮುಗಿಸಿ ತಾಯ್ನಾಡಿಗೆ ಮರಳಿ ಸೇವೆ ಸಲ್ಲಿಸುತ್ತೇನೆ' ಎನ್ನಬೇಕು. 'ತಾಯ್ನಾಡು' ಎಂಬ ಶಬ್ದ ಪ್ರಯೋಗಕ್ಕೆ ತಾನೇ ಖುಷಿಯಾದ.

'ಆದರೆ ನೀವು ತಾಯ್ನಾಡಿಗೆ ಮರಳೇ ಮರಳ್ತೀರಿ ಅಂತ ನಮಗೆ ನಂಬಿಕೆ ಬರುವಂಥಾ ಕೌಟುಂಬಿಕ ಸಂಬಂಧಗಳು ನಿಮಗಿವೆಯೆ?' ಅಂತ ಕೇಳಬಹುದು.

'ಅಯ್ಯೋ ಅಮ್ಮ ಅಪ್ಪ ಇಬ್ಬರೂ ಇಲ್ಲಾ, ಬರೀ ಹೆಂಡತಿಯಷ್ಟೇ ಇರೋದು ಅಂದ್ರೆ ಅವರಿಗೆ ಅಂಥಾ ಭಾವನಾತ್ಮಕ ಸೆಳೆತ ಅನ್ನಿಸಲಿಕ್ಕಿಲ್ಲವೇನೋ...ಛೇ ಅತ್ತೆ ಕಳೆದೆರಡು ವರ್ಷದಿಂದ ಮೊಮ್ಮಗು ಮೊಮ್ಮಗು ಅಂತ ಬೆನ್ನು ಹತ್ತಿದ್ರು, ಒಂದು ಕೂಸು ಮಾಡ್ಕೊಂಡುಬಿಟ್ಟದ್ದರೆ ಎಷ್ಟು ಛಲೋ ಆಗ್ತಿತ್ತು' ಅಂತ ಬೇಜಾರಾಯ್ತು.

ಮುಂದಿನ ಪ್ರಶ್ನೆ ಏನಿರಬಹುದು?

'ನಿಮ್ಮ ಯೋಗ್ಯತೆಗೆ ತಕ್ಕ ಜಾಬ್ ಭಾರತದಲ್ಲಿ ಸಿಗಲಿಲ್ಲವೆಂದರೆ ಏನು ಮಾಡುವಿರಿ?' ಅನ್ನಬಹುದೆ?

'ನನಗೆ ಜಾಬ್ ಸ್ಯಾಟಿಸ್ ಫ್ಯಾಕ್ಷನ್ ಮುಖ್ಯ, ಹಣವಲ್ಲ' ಅನ್ನಬೇಕು ಯಾಕಂದ್ರೆ ಮಾತು ಮಾತಿಗೂ ತಾಯ್ನಾಡು, ದೇಶಸೇವೆ ಅಂತಂದ್ರೆ ಒಂಥರಾ ಕ್ಲೀಶೆ ಅನ್ನಿಸುತ್ತೆ. ಉತ್ತರಗಳಲ್ಲಿ ಸ್ವಲ್ಪ ವೇರಿಯೇಶನ್ ಇರಬೇಕು - ಅಲ್ಲಿಗೆ ತಯ್ಯಾರಿ ಪೂರ್ಣವಾಗಿದೆಯೆನ್ನಿಸಿ ಖುಷಿಯಾಯ್ತವನಿಗೆ.

ಚಹದ ಕಪ್ ಖಾಲಿ ಮಾಡಿಟ್ಟು ಪ್ರದೀಪನನ್ನು ಸಾಗಹಾಕೋದ್ಹೇಗೆ? ಅಂತ ಯೋಚಿಸಿದ, ಒಮ್ಮೆಲೆ 'ಬರ್ಲಿಕತ್ತಾನ ಬರ್ಲಿ, ಬರಲಿ. ನಾಲ್ಕು ಜನರ ಕಿವಿ ಮೇಲೆ ನಾ ಯುಸ್ ಎಸ್ ಹೋಗ್ತೋ ವಿಷಯ ಬೀಳಬೇಕು' ಅನ್ನೋ ಖಯಾಲು ಬರೋದಕ್ಕೂ ಪ್ರದೀಪ್ 'ಏನ್ಮರಿ ಏನ್ ನಡಿಸಿ?' ಅಂತ ಶೂ ಕಳಚಿ ಒಳಬರೋದಕ್ಕೂ ಸರಿಯಾಯ್ತು.

ಒಮ್ಮೆಲೆ ಮೊಬೈಲಿನ ವಿಡಿಯೋ ಕಾಲ್ ಶುರು ಮಾಡಿದಂತೆ ಕೋಣೆಯ ವಾತಾವರಣ ಬದಲಾಯ್ತು. ಮಧು ತುಟಿಗಳ ಮೇಲೆ ನಗು ಚಿಮ್ಮಿಸ್ತಾ ಬಂದು 'ವೈನಿ ಏನಂತಾರ? ಕರ್ಕೊಂಡ್ ಬರ್ಬೇಕೋ ಬ್ಯಾಡೋ? ಕೂಡ್ರಿ, ಚಹಾ ತರ್ತೇನಿ' ಅಂದು ಅಲ್ಲೇ ನಿಂತಳು. ಪ್ರದೀಪ 'ವೈನಿ ಚಹಾ ಬ್ಯಾಡೀಗ' ಅಂದದ್ದೇ ತಡ 'ಹಂಗಾದ್ರೆ ಗೆಳೆಯಾರು ಮಾತಾಡ್ಕೋರಿ ನಾ ಯಾಕ ಶಿವನ ಪೂಜಾದಾಗ ಕರಡಿ ಬಿಟ್ಟಂಗ?' ಅನ್ನುತ್ತಾ ಪರದೆ ಸರಿಸಿ ಒಳಗೆ ಹೋದಳು.

ಪ್ರದೀಪನಿಗೆ ತನ್ನ ಇಂಟರವ್ಯೂ ತಯ್ಯಾರಿಯ ಬಗ್ಗೆ ಹೇಳ್ತಾ ಹೇಳ್ತಾ ತಾನಾಡೋ ಒಂದೊಂದು